ಅನ್ನುವ ಹಾರೈಕೆಯಲ್ಲಿ ನಿಟ್ಟುಸಿರು ಎದೆಯ ತಳಮಳದ ಆವಿಯಂತೆ ಹೊರಬಂದು ಮಗಳ ಬೆನ್ನು ಮೈಗೆಲ್ಲ ಸೋಪು ತಿಕ್ಕತೊಡಗಿದಳು. ತಲೆ ತಿಕ್ಕಿಯಾದಮೇಲೆ 'ಆತು, ನೀನೆ ಎರಕ...' ಅಂತ ತನ್ನ ಕೆಲಸಕ್ಕೆ ಹೊರಟುಬಿಡುವ ಅವ್ವ ಇವತ್ತು ಬೆನ್ನು ಮೈಗೆಲ್ಲ ಒರಟಾದ ಅಂಗೈಯಲ್ಲಿ ತಿಕ್ಕಿ ತಿಕ್ಕಿ ಸ್ನಾನ ಮಾಡಿಸುವಾಗ ನವಿರೆದ್ದರೂ ಸಣ್ಣ ಮುಜುಗರ ಆಶ್ಚರ್ಯ ಕಲಸಿಕೊಳ್ಳುತ್ತಿದ್ದವು. 'ಅವ್ವ ನಾ ಎರಕತ್ತೀನಿ ಬಿಡು. ನೀರುಳಿತಂದ್ರ ಶುಭಾ ಮಾಲತಿ ಮಾಡವಲ್ರ್ಯಾಕ' ಅಂದ ಮಗಳಿಗೆ ನಾಲಗೆ ಇನ್ನೇನು ಹೇಳಿಬಿಡುತ್ತಿದ್ದುದನ್ನು ತಡೆದು ಮಗ್ಗು ಕೊಟ್ಟು ಅಡುಗೆಮನೆಗೆ ಹೋದಳು ಕಾಶವ್ವ.

